## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

ಗ್ರಾಮೀಣ ಕೃಷಿ ಹವಾಮಾನ ಸೇವಾ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ನಾಗನಹಳ್ಳಿ, ಮೈಸೂರು 570 003

ದಿನಾಂಕ: 20-02-2024

# ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಕೊಡಗು ಜಿಲ್ಲೆಯ ಹವಾಮಾನ ಮತ್ತು ಕೃಷಿಕಾರ್ಯಕ್ರಮಗಳ ವರದಿ ಪತ್ರಿಕೆ

**ಹವಾಮಾನದ ಮುನ್ಸೂಚನೆ (21–02–2024 ರಿಂದ 25–02–2024)**

| Parameters | 21.02.2024 | 22.02.2024 | 23.02.2024 | 24.02.2024 | 25.02.2024 |
|---|---|---|---|---|---|
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ ($^0$ಸೆ) | 30 | 30 | 31 | 31 | 31 |
| ಕನಿಷ್ಠ ಉಷ್ಣಾಂಶ ($^0$ಸೆ) | 16 | 16 | 17 | 17 | 17 |
| ಮೋಡ (ಆಕ್ಟ್‌ಸ್) | 2 | 1 | 1 | 1 | 3 |
| ಗರಿಷ್ಠ ಗಾಳಿಯ ತೇವಾಂಶ (%) | 79 | 79 | 79 | 77 | 78 |
| ಕನಿಷ್ಠ ಗಾಳಿಯ ತೇವಾಂಶ (%) | 55 | 55 | 55 | 53 | 53 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 5 | 6 | 7 | 7 | 7 |
| ಗಾಳಿಯ ದಿಕ್ಕು( ಡಿಗ್ರಿ) | 198 | 158 | 158 | 169 | 243 |

**ಮುನ್ಸೂಚನೆಯ ಸಾರಾಂಶ**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಕೊಡಗು ಜಿಲ್ಲೆಯಲ್ಲಿ ದಿನಾಂಕ: 21–02–2024 ರಿಂದ 25–02–2024 ವರೆಗೆ ಮೋಡ ಕವಿದ ವಾತಾವರಣವಿದ್ದು, ಮಳೆ ಬರುವ ಸಂಭವವಿಲ್ಲ. ಗರಿಷ್ಠ ಉಷ್ಣಾಂಶ 30–31°C. ಮತ್ತು ಕನಿಷ್ಠ ಉಷ್ಣಾಂಶ 16–17°C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇಕಡ 77–79% ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇಕಡ 53–55% ವರೆಗೆ ಮತ್ತು ಗಾಳಿಯು ಗಂಟೆಗೆ 5–7 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

**ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:**

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|

- ಮುಂದಿನ 4–5 ದಿನಗಳಲ್ಲಿ ಒಣಹವೆ ಮುಂದುವರಿಯುವ ಸಾಧ್ಯತೆ ಇರುವುದರಿಂದ ರೈತರು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ನೀರನ್ನು ಹಾಯಿಸುವುದು ಸೂಕ್ತ.
- ಬೆಳೆಗಳ ಉಳಿಕೆ ಅಥವಾ ಗೊಬ್ಬರದ ಗಿಡಗಳನ್ನು ಭೂ ಹೊದಿಕೆಯಾಗಿ ಬೆಳೆಗಳಿಕೆ ಹಾಕುವುದರಿಂದ ಮಣ್ಣಿನ ತೇವಾಂಶವನ್ನು ಕಾಪಾಡಿಕೊಳ್ಳಬಹುದು

| | | |
|---|---|---|
| ತೆಂಗು | ಗರಿತಿನ್ನುವ ಕಪ್ಪು ತಲೆ ಕಂಬಳಿ ಹುಳು | ಮರಿ ಹುಳುಗಳು ಗರಿಗಳ ತಳಭಾಗದಲ್ಲಿದ್ದು ಗರಿಗಳನ್ನು ಕೆರೆದು ತಿನ್ನುತ್ತವೆ.<br>ಮರಿ ಹುಳುಗಳು ರೇಷ್ಮೆಯಂತೆ ಜಾಡಿನ ಬಲೆಯಲ್ಲಿರುತ್ತವೆ.<br>ರೇಷ್ಮೆ ಜಾಡಿನಲ್ಲಿ ಮರಿ ಹುಳುಗಳ ಹಿಕ್ಕೆಗಳು ಇದ್ದು ಬಾದೆಗೊಳಗಾದ ಗರಿಗಳು/ತೋಟಗಳು ಬೆಂಕಿಯಿಂದ ಸುಟ್ಟಂತೆ ಕಾಣುತ್ತದೆ.<br>ಪೀಡೆ ಬಾಧೆ ತೀವ್ರತೆಯಾದಲ್ಲಿ ಸಾಮೂಹಿಕವಾಗಿ ಮಾನೋಕ್ರೋಟೋಫಾಸ್ 36 ಎಸ್. ಎಲ್ |

| | | |
|---|---|---|
| | | ಕೀಟನಾಶಕವನ್ನು ಬೇರಿನ ಮೂಲಕ ಮರಗಳಿಗೆ ಉಣಿಸಬೇಕು.<br>ವಿಧಾನ : ಮರದಿಂದ ಒಂದು ಮೀಟರ್ ಅಂತರದಲ್ಲಿ ಒಂದು ಬಲಿತ ಪೆನ್ಸಿಲ್ ಗಾತ್ರದ ಕಂದು ಬಣ್ಣದ ಬೇರನ್ನು ಅಗೆದು ತೆಗೆದು ಅದರ ತುದಿಯನ್ನು ಓರೆಯಾಗಿ ಕತ್ತರಿಸಿ, ನಾಲ್ಕು ಸೆಂ. ಮೀ. ಅಗಲ 15 ಸೆಂ. ಮೀ. ಉದ್ದದ ಪ್ಲಾಸ್ಟಿಕ್ ಚೀಲದಲ್ಲಿ 7.5 ರಿಂದ 10 ಮಿ. ಲೀ ಮಾನೋಕ್ರೋಟೋಫಾಸ್ 36 ಎಸ್. ಎಲ್ ಗೆ ಅಷ್ಟೇ ಪ್ರಮಾಣದ ನೀರನ್ನು ಸೇರಿಸಿ ತಯಾರಿಸಿದ ದ್ರಾವಣದಲ್ಲಿ ಕತ್ತರಿಸಿದ ಬೇರಿನ ಭಾಗವನ್ನು ಮುಳುಗುವಂತೆ ಊರಿ, ಪ್ಲಾಸ್ಟಿಕ್ ಚೀಲದ ಬಾಯನ್ನು ದಾರದಿಂದ ಕಟ್ಟಬೇಕು.<br>ಈ ರೀತಿಯಲ್ಲಿ ಮಾಡಿದ 24 ಗಂಟೆಗಳಲ್ಲಿ ಬೇರಿನ ಮೂಲಕ ಕೀಟನಾಶಕವನ್ನು ಮರ ಹೀರಿಕೊಳ್ಳುತ್ತದೆ. ಹೀರಿಕೊಳ್ಳದಿದ್ದರೆ 48 ಗಂಟೆಗಳ ನಂತರ ಬೇರೆ ಬೇರಿನಿಂದ ಕೀಟನಾಶಕವನ್ನು ಉಣಿಸಬೇಕಾಗುತ್ತದೆ. ಕೀಟನಾಶಕ ಬಳಸಿದ 30 ದಿನಗಳವರೆಗೂ ಎಳನೀರು/ಕಾಯಿಗಳನ್ನು ಬಳಸಬಾರದು. |
| ಅಲಸಂದೆ | ಸಸ್ಯಹೇನು | ನೂರಾರು ಸಸ್ಯಹೇನುಗಳು ಸುಳಿ, ಎಲೆ, ಹೂ, ಮೊಗ್ಗು, ಕಾಯಿಗಳಿಂದ ರಸ ಹೀರುತ್ತಿರುತ್ತವೆ. ಎಲೆಗಳು ಮುದುಡುವುದು, ಕಾಯಿಗಳಲ್ಲಿನ ಬೀಜ ಚೀಕಲಾಗುವುದು. ಕೆಳಗಿನ ಎಲೆಗಳಲ್ಲಿ ಕಪ್ಪು ಬೂಷ್ಟು ಬೆಳೆಯುವುದು. ಕೀಟ ಬಾದೆ ಕಾಣಿಸಿಕೊಂಡಾಗ ಲೀ. ನೀರಿಗೆ 1.7 ಮಿ.ಲೀ.ಡೈಮಿಥೋಯೇಟ್ 30 ಇಸಿ. ಸೇರಿಸಿ ಸಿಂಪಡಿಸುವುದು. ಎಕರೆಗೆ 200 ಲೀ. ಸಿಂಪರಣಾ ದ್ರಾವಣವನ್ನು ಬೇಕಾಗುತ್ತದೆ. |
| ಮಾವು | ಬೂದಿರೋಗ ಹಾಗೂ ಜಿಗಿಹುಳು (ಜಾಸಿಡ್ಸ್) | • ವಾತಾವರಣದಲ್ಲಿ ಬೆಳಗಿನ ಸಮಯದಲ್ಲಿ ಕಡಿಮೆ ಉಷ್ಣಾಂಶ ಮತ್ತು ಹೆಚ್ಚಿನ ಆರ್ದ್ರತೆ ಇರುವುದರಿಂದ ಹೂ ಬಿಡುವ ಹಂತದಲ್ಲಿ ಬೂದಿರೋಗದ ಹಾಗೂ ಜಿಗಿಹುಳು ಭಾದೆ ಕಂಡು ಬರುತ್ತದೆ. ಬೂದಿರೋಗದ ನಿಯಂತ್ರಣಕ್ಕಾಗಿ ಹೂ ಬಿಡುವ ಮತ್ತು ಕಾಯಿ ಕಚ್ಚಿದ ಹಂತದಲ್ಲಿ ಲೀ. ನೀರಿಗೆ 3.0 ಗ್ರಾಂ. ನೀರಿನಲ್ಲಿ ಕರಗುವ ಗಂಧಕದ ಪುಡಿ ಅಥವಾ 1.0 ಮಿಲೀ. ಹೆಕ್ಸಾಕೋನೋಜೋಲ್ 5 ಇಸಿ. ಔಷದವನ್ನು ಬೆರಸಿ ಸಿಂಪಡಿಸಬೇಕು.<br>• ಜಿಗಿ ಹುಳು ಕೀಟದ ನಿಯಂತ್ರಣಕ್ಕೆ ಹೂವು ಬಿಡುವ ಮುಂಚೆ ಮತ್ತು ಕಾಯಿಗಳು ಬಟಾಣಿ ಕಾಳಿನ ಗಾತ್ರದಲ್ಲಿದ್ದಾಗ ಲೀ. ನೀರಿಗೆ 0.3 ಮಿಲೀ ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್. ಬೆರೆಸಿ ಸಿಂಪಡಿಸುವುದು. |
| ತೆಂಗು | ರುಗೋಸ್ ಬಿಳಿ ನೊಣ | ಬಿಳಿ ನೊಣಗಳು ಎಲೆಗಳ ಕೆಳಭಾಗದಲ್ಲಿ ರಸವನ್ನು ಹೀರುತ್ತವೆ. ಹೆಚ್ಚು ರಸಹೀರುವುದರಿಂದ ಸಿಹಿಯಾದದ್ರವ್ಯವನ್ನು ಹೊರಹಾಕುತ್ತದೆ, ಇದು ಕಪ್ಪು ಶಿಲೀಂಧ್ರದ (ಕ್ಯಾಪ್ನೋಡಿಯಮ್) ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಇದು ಸಸ್ಯದ ದ್ಯುತಿಸಂಶ್ಲೇಷಕ ಮೇಲೆ ಪರಿಣಾಮ ಬೀರುತ್ತದೆ. 2.5% ಮೈದಾ ಪೇಸ್ಟ್ ದ್ರಾವಣವನ್ನು ಡಿಟರ್ಜೆಂಟ್/ಖಾದಿ ಸೋಪ್ @ 5 ಗ್ರಾಂ/ಲೀ ನೊಂದಿಗೆ ಬೆರೆಸಿ ಸಿಂಪಡಿಸುವ ಮೂಲಕ ಎಲೆಯ ಮೇಲ್ಮೈಯಲ್ಲಿ ಕಪ್ಪು ಶಿಲೀಂಧ್ರದ(ಕ್ಯಾಪ್ನೋಡಿಯಮ್) ಬೆಳವಣಿಗೆಯನ್ನು ಹೊರಹಾಕಬಹುದು.<br>ಹೆಚ್ಚು ಹಾನಿಯಾದಲ್ಲಿ, ಬೇವಿನ ಎಣ್ಣೆ 0.5% ಅಥವಾ NSKE 5% ಅನ್ನು ಮಾತ್ರ ಸಿಂಪಡಿಸಿ ಮತ್ತು ಯಾವುದೇ ರೀತಿಯ ಕೀಟನಾಶಕಗಳನ್ನು ಸಿಂಪಡಿಸುವುದು ಸೂಕ್ತವಲ್ಲ. |
| ಜಾನುವಾರು | • ನವಜಾತ ಕರುಗಳನ್ನು ಶೀತದಿಂದ ರಕ್ಷಿಸಲು, ಎಳೆಯ ಕರುಗಳಿಗೆ ಒಣ ಹುಲ್ಲಿನ/ಹುಲ್ಲು ಹಾಸಿಗೆಯನ್ನು ಒದಗಿಸಿ, ಹಾಸಿಗೆಯ ಸಾಮಗ್ರಿಯನ್ನು ಒಣಗಿಸಿ ಮತ್ತು ನಿಯಮಿತವಾಗಿ ಬದಲಿಸಿ. ಮಧ್ಯಾಹ್ನದ ಸಮಯದಲ್ಲಿ ಪ್ರಾಣಿಗಳನ್ನು ಸೂರ್ಯನ ಬೆಳಕಿಗೆ ಒಡ್ಡಿ. ರಾತ್ರಿಯ ತಾಪಮಾನದಲ್ಲಿ ಕುಸಿತದ ಸಾಧ್ಯತೆಯು ಪ್ರಾಣಿಗಳನ್ನು ಶೆಡ್‌ಅಡಿಯಲ್ಲಿ ಇರಿಸಿ ಮತ್ತು ದನದ ಕೊಟ್ಟಿಗೆಯಲ್ಲಿ ನೊಣ ಮತ್ತು ಸೊಳ್ಳೆಗಳನ್ನು ನಿಯಂತ್ರಿಸಲು ಸುತ್ತಲೂ ಸ್ವಚ್ಛಗೊಳಿಸುತ್ತದೆ.<br>• ಮುಂಜಾನೆ ಮತ್ತು ಸಂಜೆ ಸಮಯದಲ್ಲಿ 50-100 ಗ್ರಾಂ ಖನಿಜ ಮಿಶ್ರಣದ ಜೊತೆಗೆ ಗುಣಮಟ್ಟದ ಮೇವುಗಳೊಂದಿಗೆ ಪ್ರಾಣಿಗಳಿಗೆ ಆಹಾರವನ್ನು ನೀಡಿ. ಇದು ಹಾಲಿನ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಮತ್ತು ಪ್ರಾಣಿಗಳ ರೋಗ ನಿರೋಧಕಶಕ್ತಿಯನ್ನು ಹೆಚ್ಚಿಸುತ್ತದೆ. ಹಾಲುಣಿಸುವ ಪ್ರಾಣಿಗಳಲ್ಲಿ ಹಾಲಿನ ಜ್ವರ ಸಂಭವಿಸುವುದನ್ನು ತಪ್ಪಿಸಲು, ರೈತರು ಬಾಯಿಯಿಂದ ಸುಲಭವಾಗಿ ಹೀರಿಕೊಳ್ಳುವ ಕ್ಯಾಲ್ಸಿಯಂ ಪೂರಕಗಳನ್ನು ತಿನ್ನಲು ಸಲಹೆ ನೀಡುತ್ತಾರೆ.<br>• ಹೆಚ್ಚಿನ ಆರ್ದ್ರತೆಯಿಂದಾಗಿ ರೈತರಿಗೆ ಮನೆ ನೊಣ/ಇತರ ಹಾವಳಿಯನ್ನು ತಪ್ಪಿಸಲು ಪ್ರಾಣಿಗಳ ಶೆಡ್ ಸುತ್ತಲೂ | |

| | |
|---|---|
| | ಸ್ವಚ್ಛವಾಗಿರಲು ಸಲಹೆ ನೀಡಲಾಗುತ್ತದೆ. |

- ರೈತರು **"ದಾಮಿನಿ"** ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು"ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ॥. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ. ವಿ, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 08212591267/ 9535345814 ರವರನ್ನು ಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು